ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/01/ಸಿಡಿಟಿಪಿ/2017-18 /1603

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ:08-09-2017.

-: ಸುತ್ತೋಲೆ :-

ವಿಷಯ:- CDTP ಯೋಜನೆಯಡಿ ಕೌಶಲ್ಯಾಭಿವೃದ್ದಿ ತರಬೇತಿ ಪಡೆದವರ/ಪಡೆಯುತ್ತಿರುವವರ ವಿವರ ನೀಡುವ ಕುರಿತು.

*****

ಮೇಲೆ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಮಾನವ ಸಂಪನ್ಮೂಲ ಅಭಿವೃದ್ದಿ ಇಲಾಖೆ, ಭಾರತ ಸರ್ಕಾರ ಇವರ ಧನ ಸಹಾಯದಿಂದ ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ನಡೆಸಲಾಗುತ್ತಿರುವ CDTP ಯೋಜನೆಯ " Skill Development Training Programme" ನಡಿ 2017-18ನೇ ಸಾಲಿನಲ್ಲಿ ನಡೆಸಲಾಗುತ್ತಿರುವ ತರಬೇತಿಗಳ ಹಾಗೂ ತರಬೇತಿ ಪಡೆದವರ/ಪಡೆಯುತ್ತಿರುವವರ ಸಂಖ್ಯಾವಾರು ವಿವರಗಳನ್ನು ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯವರಿಗೆ ತುರ್ತಾಗಿ ನೀಡಬೇಕಾಗಿದೆ.

ಆದುದರಿಂದ 2017-18ನೇ ಸಾಲಿನಲ್ಲಿ ದಿನಾಂಕ: 01-04-2017 ರಿಂದ 30-9-2017ರವರೆಗೆ ನಡೆಸಲಾದ ಹಾಗೂ ನಡೆಸಲಾಗುತ್ತಿರುವ ತರಬೇತಿಯ ಹೆಸರು ಮತ್ತು ತರಬೇತಿ ಪಡೆದವರ/ಪಡೆಯುತ್ತಿರುವವರ ಸಂಖ್ಯಾವಾರು ವಿವರಗಳನ್ನು ಡಿಟಿಇ ವೆಬ್ ಸೈಟ್‌ನಲ್ಲಿರುವ ಸದರಿ ಶೀರ್ಷಿಕೆಯೊಂದಿನ ಕೊಂಡಿಯಲ್ಲಿ (Link) ದಿನಾಂಕ: 11-09-2017ರ ಸಂಜೆ 4.00 ಗಂಟೆಯೊಳಗೆ ಭರ್ತಿ ಮಾಡಲು ತುರ್ತು ಗಮನಹರಿಸಲು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)
08/9/17

ಇವರಿಗೆ:

1. ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.